10. ಶ್ರೀ ಶಂಕರವಿಲಾಸ, ಸಂಸ್ಕೃತ ಪಾಠಶಾಲೆ, ಮೈಸೂರು
11. ಶ್ರೀ ರಾಮಮಿತ್ರ ಸಂಸ್ಕೃತ ಪಾಠಶಾಲೆ. ಮೈಸೂರು
12. ಶ್ರೀ ವಿಶ್ವಚೇತನ ಸಂಸ್ಕೃತ ಪಾಠಶಾಲೆ. ಟಿ. ನರಸೀಪುರ
13. ಶ್ರೀ ಫಲಹಾರ ಪ್ರಭುದೇವಸ್ವಾಮಿ ಸಂಸ್ಕೃತ ಪಾಠಶಾಲೆ. ಕುರುಬೂರು
14. ಶ್ರೀ ಆದಿ ಚುಂಚನಗಿರಿ ಸಂಸ್ಕೃತ ಪಾಠಶಾಲೆ. ಚುಂಚನಕಟ್ಟೆ
15. ಶ್ರೀ ಜೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ, ಮೈಸೂರು
16. ಸಂಸ್ಕೃತ ಪಾಠಶಾಲೆ. ಸಾಲಿಗ್ರಾಮ, ಕೆ.ಆರ್. ನಗರ ತಾಲ್ಲೂಕು
17. ಶ್ರೀ ಗುರುಮಲ್ಲೇಶ್ವರ ಸಂಸ್ಕೃತ ಪಾಠಶಾಲೆ, ಹುಣಸೂರು
18. ಶ್ರೀ ಚಂದ್ರಮೌಳೀಶ್ವರಿ, ಸಂಸ್ಕೃತ ಪಾಠಶಾಲೆ. ಮೈಸೂರು

1080 (1454) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯವನ್ನು ಯಾವಾಗ ಸ್ಥಾಪಿಸಲಾಯಿತು;

(ಆ) ಬಿಜಾಪುರದಲ್ಲಿರುವ ಮಹಿಳಾ ವಿಶ್ವವಿದ್ಯಾಲಯವನ್ನು ಬೇರೆಡೆಗೆ ಸ್ಥಳಾಂತರಿಸುವ ವಿಚಾರ ಸರ್ಕಾರಕ್ಕೆ ಇದೆಯೇ;

(ಇ) ಇದ್ದಲ್ಲಿ ಯಾವ ಕಾರಣಗಳಿಗಾಗಿ ಸ್ಥಳಾಂತರಿಸಲಾಗುವುದು?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

(ಅ) ದಿನಾಂಕ: 21-06-2003ರಲ್ಲಿ ಸ್ಥಾಪಿಸಲಾಯಿತು.

(ಆ) ಇಲ್ಲ.

(ಇ) ಉದ್ಭವಿಸುವುದಿಲ್ಲ.

1081 (1465) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಬಿಜಾಪುರ ತಾಲ್ಲೂಕಿನ ಮಮದಾಪುರದಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಬೇಕೆಂಬ ಬೇಡಿಕೆ ಇರುವುದು ನಿಜವೇ;

(ಆ) ಇದ್ದಲ್ಲಿ ಕಳೆದ ಅಧಿವೇಶನದಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಲು ಸರ್ಕಾರ ಭರವಸೆ ನೀಡಲಾಗಿದ್ದು, ಈ ಕಾಲೇಜನ್ನು ಸ್ಥಾಪಿಸಲು ಯಾವ ಅಗತ್ಯವಾದ ಕ್ರಮವನ್ನು ಕೈಗೊಂಡಿದೆ;

(ಇ) ಈವರೆಗೆ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸದೇ ಇರುವುದಕ್ಕೆ ಕಾರಣಗಳೇನು;

(ಈ) ಯಾವ ಕಾಲಮಿತಿಯೊಳಗೆ ಸರ್ಕಾರ ಕಾಲೇಜನ್ನು ಪ್ರಾರಂಭಿಸಲಾಗುವುದು?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

(ಅ) ಹೌದು.

(ಆ) ಸರ್ಕಾರದ ಆದೇಶ ಹೊರಡಿಸಲಾಗಿದೆ.

(ಇ) ಅನ್ವಯಿಸುವುದಿಲ್ಲ.

(ಈ) 2007–08ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.

1082(1466) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :– ಮಾನ್ಯ ಜಲ ಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಮುಳವಾಡ ಏತ ನೀರಾವರಿಯ ಯೋಜನೆಯ ಪೂರ್ವ ಮತ್ತು ಪಶ್ಚಿಮ ಕಾಲುವೆಯಡಿ ಬರುವಂತಹ ಹೊಲಗಾಲುವೆಗಳ ಒಟ್ಟು ವಿಸ್ತೀರ್ಣ ಎಷ್ಟು;

(ಆ) ಈ ಮುಳವಾಡ ಏತ ನೀರಾವರಿ ಯೋಜನೆಯಡಿ ಬರತಕ್ಕಂತಹ ಎಲ್ಲಾ ಹೊಲಗಾಲುವೆಗಳ ನಿರ್ಮಾಣ ಕೆಲಸವು ಮುಕ್ತಾಯಗೊಂಡಿದೆಯೇ;

(ಇ) ಮುಳವಾಡ ಏತ ನೀರಾವರಿ ಯೋಜನೆಯಡಿ ಬರುವಂತಹ ಹೊಲಗಾಲುವೆಗಳ ನಿರ್ಮಾಣ ಕೆಲಸ ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಯಾವ ಕಾರಣಗಳಿಗಾಗಿ ಈ ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಮುಗಿಸಲಾಗಲಿಲ್ಲ;

(ಉ) ಬಾಕಿ ಇರುವ ಕಾಮಗಾರಿಗಳನ್ನು ಯಾವ ನಿರ್ದಿಷ್ಟ ಕಾಲದಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಜಲ ಸಂಪನ್ಮೂಲ ಸಚಿವರು)

(ಅ) ಮುಳವಾಡ ಏತ ನೀರಾವರಿ ಯೋಜನೆ ಅಡಿ ಬರುವ ಹೊಲಗಾಲುವೆ ಕ್ಷೇತ್ರವು ಈ ಕೆಳಗಿನಂತಿವೆ;

1) ಪೂರ್ವ ಕಾಲುವೆ – 5, 169.60 ಹೆ. (ಯೋಜಿತ ಕ್ಷೇತ್ರ 5,000 ಹೆ.)
2) ಪಶ್ಚಿಮ ಕಾಲುವೆ – 20, 475.00 ಹೆ. (ಯೋಜಿತ ಕ್ಷೇತ್ರ 25,850 ಹೆ.)
ಒಟ್ಟು ಕ್ಷೇತ್ರ – 25, 644.60 ಹೆ. (ಯೋಜಿತ ಕ್ಷೇತ್ರ 30, 850 ಹೆ.)